# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 50

ಸ್ವಾಮಿ ನಿತ್ಯಸ್ಥಾನಂದ



### ಅಷ್ಟಪಾಶ

**ಶ್ರೀರಾಮಕೃಷ್ಣರು:** ‘‘ಲಜ್ಜೆ, ದ್ವೇಷ ಮತ್ತು ಭಯ ಇವು ಮೂರು ಇರಕೂಡದು. ಈ ದಿನ ಇಲ್ಲಿ ಆನಂದ ಬಹಳವಾಗಿ ತುಂಬಿತುಳಕಾಡಲಾರಂಭಿಸುತ್ತದೆ. ಆದರೆ ಯಾರು ಭಗವನ್ನಾಮ ದಿಂದ ಮತ್ತರಾಗಿ ನೃತ್ಯಗೀತೆಗಳಲ್ಲಿ ಭಾಗವಹಿಸಲೊಲ್ಲರೊ ಅವರಿಗೆ ಎಂದಿಗೂ ಭಗವಂತನ ಸಾಕ್ಷಾತ್ಕಾರ ದೊರಕದು. ಭಗವ ದ್ವಿಷಯವಾಗಿ ಲಜ್ಜೆಯೇಕೆ? ಭಯವೇಕೆ? ಈಗ ನೀವೆಲ್ಲರೂ ಹಾಡಿ.’’ *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೫೦)*

ಶ್ರೀರಾಮಕೃಷ್ಣರು ಇಲ್ಲಿ ಅಷ್ಟಪಾಶಗಳ ಪೈಕಿ ಮೂರು ಪಾಶ ಗಳನ್ನು ಮಾತ್ರ ಪ್ರಸ್ತಾಪಿಸಿದ್ದಾರೆ. ಅಷ್ಟ ಪಾಶಗಳು ಯಾವು ದೆಂದರೆ; ಲಜ್ಜಾ, ಘೃಣಾ, ಭಯ, ಶಂಕಾ, ಜುಗುಪ್ಸೆ, ಕುಲ, ಶೀಲ ಮತ್ತು ಜಾತಿ. ಘೃಣಾ ಎಂದರೆ ದ್ವೇಷ ಅಥವಾ ತಿರಸ್ಕಾರ ಮನೋಭಾವ. ಲಜ್ಜಾ ಎಂದರೆ ತೀರ ದಾಕ್ಷಿಣ್ಯ ಪ್ರವೃತ್ತಿ – ಏನು ಮಾಡುವುದಕ್ಕೂ ನಾಚಿಕೆಪಟ್ಟುಕೊಳ್ಳುವುದು. ಇದರಿಂದ ನಾವು ಅನೇಕ ಉತ್ತಮ ಅವಕಾಶಗಳನ್ನು ಕಳೆದುಕೊಳ್ಳುತ್ತೇವೆ. ಭಯದ ಬಗ್ಗೆ ಪುಟಗಟ್ಟಲೆ ಬರೆಯಬಹುದು. ಸೋಲಿನ ಭಯ, ಅವ ಮಾನದ ಭಯ – ಹೀಗೆ ಅನೇಕ ರೀತಿಯ ಭಯಗಳಿರುತ್ತವೆ. ಶಂಕಾ ಅಥವಾ ಸಂದೇಹ ಸರ್ವೇಸಾಮಾನ್ಯವಾದುದು. ಇದನ್ನು ಜಯಿಸಲು ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕು. ಯಾವುದೇ ವಿಷಯ ದಲ್ಲಾಗಲಿ – ವ್ಯಕ್ತಿಯ ವಿಷಯದಲ್ಲಾಗಲಿ, ವಸ್ತುವಿನ ವಿಷಯದ ಲ್ಲಾಗಲಿ – ಜುಗುಪ್ಸೆ ಮನಸ್ಸನ್ನು ಸಂಕುಚಿತಗೊಳಿಸುತ್ತದೆ, ಸಮ ದರ್ಶಿಯಾಗಿರಲು ಸಾಧ್ಯವಾಗುವುದಿಲ್ಲ. ಕುಲಾಭಿಮಾನ, ನಾನು ಉತ್ತಮ ಕುಲಕ್ಕೆ ಸೇರಿದವನು ಎಂಬ ಅಭಿಮಾನ ಆಧ್ಯಾತ್ಮಿಕ ಪ್ರಗತಿಗೆ ದೊಡ್ಡ ಅಡಚಣೆಯಾಗುತ್ತದೆ. ಉತ್ತಮ ಚಾರಿತ್ರ್ಯವಂತ ನಾಗಿದ್ದರೆ (ಶೀಲ) ‘ನಾನು ಚಾರಿತ್ರ್ಯವಂತ’ ಎಂಬ ಅಭಿಮಾನವೂ ಇರಕೂಡದು. ಒಂದು ಆಂಗ್ಲ ನುಡಿ: ‘Sin is not so sinful as the pride in one’s virtue’ (ಸದ್ಗುಣದ ಹೆಮ್ಮೆ ಪಾಪ ಕ್ಕಿಂತಲೂ ದೊಡ್ಡ ಪಾಪ). ಜಾತಿಯ ಅಭಿಮಾನವೇ ಸಮಾಜ ದಲ್ಲಿ ಅನೇಕ ಗೊಂದಲಗಳಿಗೆ, ಸಂಘರ್ಷಗಳಿಗೆ ಕಾರಣವಾಗಿದೆ, ವ್ಯಕ್ತಿಯ ಆಧ್ಯಾತ್ಮಿಕ ಪ್ರಗತಿಗೂ ಮಾರಕವಾಗಿದೆ. ಇದನ್ನು ಬಿಡಲು ಶ್ರೀರಾಮಕೃಷ್ಣರು ಕೊಳಚೆ ಪ್ರದೇಶವನ್ನು ತಾವೇ ಶುದ್ಧ ಗೊಳಿಸುತ್ತಿದ್ದರು.

ಈ ದೋಷಗಳು ನಮ್ಮನ್ನು ಮುಕ್ತವಾಗಿ ವ್ಯವಹರಿಸಲು ಬಿಡುವುದಿಲ್ಲ. ಮಕ್ಕಳಲ್ಲಿ ಇವುಗಳಿಲ್ಲದಿರುವುದರಿಂದ ಮುಕ್ತ ವಾಗಿ ವರ್ತಿಸುತ್ತವೆ, ಅವರಲ್ಲಿ ಆ ಮುಗ್ಧತೆ ಇರುತ್ತದೆ. ಮುಕ್ತ ಪುರುಷರು ಇವುಗಳನ್ನು ಮೀರಿರುವುದರಿಂದ ಮುಕ್ತವಾಗಿ ವರ್ತಿಸುತ್ತಾರೆ. ಮಕ್ಕಳದು ಜ್ಞಾನರಹಿತ ಬಾಲ್ಯಾವಸ್ಥೆ; ಮುಕ್ತ ಪುರುಷನದು ಜ್ಞಾನಸಹಿತ ಬಾಲ್ಯಾವಸ್ಥೆ. ಡೇವಿಡ್ ಬೆಂಟ್ಲಿ ಹರ್ಟ್ ಎಂಬುವವರ ಮಾತು ಸ್ವಾರಸ್ಯಕರವಾಗಿದೆ: ‘‘Wisdom is the recovery of innocence at the far end of experience’’(‘ಅನುಭವಗಳ ಕಟ್ಟಕಡೆಯಲ್ಲಿ ಪುನಃ ಪಡೆಯುವ ಮುಗ್ಧತೆಯೇ ವಿವೇಕಬುದ್ಧಿ.’)

### ಭಾವಕ್ಕೆ ತಕ್ಕಂತೆ ಭಗವಂತ

**ಶ್ರೀರಾಮಕೃಷ್ಣರು:** ''ಜನರು ಭಗವಂತನನ್ನು ತಮ್ಮ ತಮ್ಮ ರುಚಿಭಾವಗಳಿಗನುಸಾರ ಪೂಜೆ ಮಾಡುತ್ತಾರೆ. ಇದು ಮನೆಗೆ ಒಂದು ಮೀನು ತಂದು ಅದನ್ನೇ ತಾಯಿ ವಿವಿಧ ರೀತಿಯಲ್ಲಿ ಅಡಿಗೆ ಮಾಡಿ ಮಕ್ಕಳಿಗೆ ಬಡಿಸುವ ಹಾಗೆ. ಕೆಲವಕ್ಕೆ ಪಲಾವು ಮಾಡಿ ಬಡಿಸುತ್ತಾಳೆ. ಆದರೆ ಎಲ್ಲ ಮಕ್ಕಳು ಅದನ್ನು ಅರಗಿಸಿಕೊಳ್ಳಲಾರವು. ಜೀರ್ಣಶಕ್ತಿ ಕಡಿಮೆಯಿರುವ ಮಕ್ಕಳಿಗೆ ಆಕೆ ಮೀನಿನ ಸಾರು ಮಾಡಿ ಬಡಿಸುತ್ತಾಳೆ. ಇನ್ನು ಕೆಲವಕ್ಕೆ ಮೀನಿನ ಬಜ್ಜಿ, ಮೀನಿನ ಗೊಜ್ಜು ಕಂಡರೆ ಇಷ್ಟ. ಎಲ್ಲ ಜೀರ್ಣಶಕ್ತಿ ಮತ್ತು ರುಚಿಯನ್ನು ಅವಲಂಬಿಸಿದೆ.

''ಋಷಿಗಳು ಜ್ಞಾನಮಹರ್ಷಿಗಳಾಗಿದ್ದರು. ಆದ್ದರಿಂದ ಅವರು ಅಖಂಡ ಸಚ್ಚಿದಾನಂದನಿಗಾಗಿ ಹುಡುಕುತ್ತಿದ್ದರು. ಆದರೆ ಭಕ್ತರಿಗೆ ಭಕ್ತಿಯನ್ನು ಆಸ್ವಾದಿಸಬೇಕೆಂಬ ಇಚ್ಛೆ. ಆದ್ದರಿಂದ ಅವರಿಗೆ ಅವತಾರ ಪುರುಷರು ಬೇಕು. ಭಗವಂತನ ಸಾಕ್ಷಾತ್ಕಾರ ದೊರೆಯಿತು ಎಂದರೆ ಮನಸ್ಸಿನ ಅಂಧಕಾರ ನಾಶವಾಗಿ ಬಿಡುತ್ತದೆ. ಪುರಾಣಗಳಲ್ಲಿ ಹೇಳಿದೆ: ರಾಮಚಂದ್ರ ಸಭೆಗೆ ಬಂದಾಗ, ಶತ ಸೂರ್ಯರು ಉದಯವಾದಂತಾಯಿತು ಎಂಬುದಾಗಿ. ಹಾಗಾದರೆ ಸಭಿಕರೆಲ್ಲ ಏಕೆ ಸುಟ್ಟು ಭಸ್ಮವಾಗಿ ಬಿಡಲಿಲ್ಲ? ಅದಕ್ಕೆ ಕಾರಣ, ಆತನ ಜ್ಯೋತಿ ಜಡ ಜ್ಯೋತಿಯಲ್ಲ. ಸೂರ್ಯೋದಯವಾದೊಡನೆ ಪದ್ಮಗಳು ಅರಳುವ ಹಾಗೆ ಇಡೀ ಸಭಿಕರ ಹೃತ್‌ಪದ್ಮ ಅರಳಲಾರಂಭಿಸಿದವು.'' *(ಅಲ್ಲೇ, ಪು.೧೫೨-೫೩)*

ಶ್ರೀರಾಮಕೃಷ್ಣರ ಮೇಲಿನ ಮಾತು ಷಡಕ್ಷರದೇವನ ಮಾತನ್ನು ನೆನಪಿಸಿ ಕೊಡುತ್ತದೆ:

**ಅವರವರ ಭಾವಕ್ಕೆ ಅವರವರ ಅರ್ಚನೆಗೆ**
**ಅವರವರಿಗೆಲ್ಲ ದೇವ ನೀನೊಬ್ಬನೆ!**

ಭಕ್ತಿಯು ಭಾವಕ್ಕೆ ಸಂಬಂಧಿಸಿದುದು, ಜ್ಞಾನವು ಬುದ್ಧಿಗೆ ಸಂಬಂಧಿಸಿದುದು. ಇವರೆಡರ ಬೆಳವಣಿಗೆಯೂ ಆವಶ್ಯಕ. ವಿಚಾರವಿಲ್ಲದ ಭಕ್ತಿಯು ಕೇವಲ ಭಾವುಕತೆಗೆ ಕಾರಣವಾಗಬಹುದು ಮತ್ತು ಭಕ್ತನು ಮೂಢನಂಬಿಕೆಗಳಿಗೆ ವಶನಾಗಬಹುದು. ಅಷ್ಟೇ ಅಲ್ಲದೆ ಅದು ಮತಾಂಧತೆಗೂ ಕಾರಣವಾಗುವ ಸಂಭವವಿದೆ – ವಿಶೇಷವಾಗಿ ಪ್ರಾರಂಭಾವಸ್ಥೆಯಲ್ಲಿ. ಕೇವಲ ವಿಚಾರವನ್ನೇ ಅವಲಂಬಿಸಿದರೆ ಸಾಧಕನು ಒಣಜ್ಞಾನಿಯಾಗಬಹುದು – ತೋತಾಪುರಿಯಂತೆ. ಶ್ರೀರಾಮಕೃಷ್ಣರ ಆದರ್ಶ ಜ್ಞಾನಮಿಶ್ರಿತ ಭಕ್ತಿ. ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ: ''Spiritual aspirant must be physically dynamic, intellectually brilliant and emotionally beautiful.'' – 'ಆಧ್ಯಾತ್ಮಿಕ ಸಾಧಕನು ದೈಹಿಕವಾಗಿ ಕ್ರಿಯಾಶೀಲನಾಗಿರಬೇಕು, ಬೌದ್ಧಿಕವಾಗಿ ಮೇಧಾವಿಯಾಗಿರಬೇಕು ಮತ್ತು ಭಾವನಾತ್ಮಕವಾಗಿ ಸುಂದರನಾಗಿರಬೇಕು.'

### ಪರಮಹಂಸರ ಮೂರು ಅವಸ್ಥೆಗಳು

''ಪರಮಹಂಸರಿಗೂ ಗೌರಾಂಗನ ಹಾಗೆ ಮೂರು ಅವಸ್ಥೆಗಳು ಒಂದಾದ ಮೇಲೊಂದು ಬರುತ್ತವೆ. ಕೆಲವು ವೇಳೆ ಅವರು ಅಂತರ್ದಶಾವಸ್ಥೆಯಲ್ಲಿರುತ್ತಾರೆ. ಆಗ ಚಿತ್ರಪಟದ ಬೊಂಬೆಯೋಪಾದಿಯಲ್ಲಿ ಜಡರಾಗಿ ಬಾಹ್ಯಜ್ಞಾನಶೂನ್ಯರಾಗಿರುತ್ತಾರೆ. ಇನ್ನು ಕೆಲವು ವೇಳೆ ಅರ್ಧಬಾಹ್ಯದಶೆಯಲ್ಲಿರುತ್ತಾರೆ. ಆಗ ಅವರು ಪ್ರೇಮಾವಿಷ್ಟರಾಗಿ ನರ್ತಿಸುತ್ತಿರುತ್ತಾರೆ. ಮತ್ತೆ ಕೆಲವು ವೇಳೆ ಬಾಹ್ಯದಶಾವಸ್ಥೆಯಲ್ಲಿರುತ್ತಾರೆ.

''ಆಗ ಭಕ್ತರೊಡನೆ ಸಂಕೀರ್ತನೆ ಮಾಡುತ್ತಿರುತ್ತಾರೆ. ಪರಮಹಂಸರು ಸಮಾಧಿಸ್ಥರಾಗಿ ಸ್ಥಿರವಾಗಿ ನಿಂತುಕೊಂಡಿರುವುದು, ಅವರ ಕೊರಳಲ್ಲಿ ಒಳ್ಳೆಯ ಸುವಾಸನೆ ಬೀರುತ್ತಿರುವ ಮಲ್ಲಿಗೆ ಹೂವಿನ ಹಾರ ನೇತಾಡುತ್ತಿರುವುದು, ಅವರ ಚಂದ್ರವದನ ಪ್ರೇಮಾನುರಂಜಿತವಾಗಿರುವುದು, ಭಕ್ತರು ಅದರ ಸುತ್ತ ನರ್ತಿಸುತ್ತ ಹಾಡುತ್ತಿರುವುದು – ಈ ದೃಶ್ಯಗಳೆಲ್ಲ ದೇವದುರ್ಲಭವಾದುದಾಗಿ ಕಂಡುಬಂದವು.'' *(ಅಲ್ಲೇ, ಪು.೧೫೪)*

ಒಂದು ಸಾಮಾನ್ಯ ಉದಾಹರಣೆಯ ಮೂಲಕ ಈ ಅವಸ್ಥೆಗಳನ್ನು ವಿವರಿಸಬಹುದು: ಯಾವುದೋ ಕೆಲಸಕ್ಕಾಗಿ ಸಚಿವರನ್ನು ನೋಡಲು ಆಫೀಸಿಗೆ ಹೋದಾಗ ಕೆಲವುಕಾಲ ನಮ್ಮ ಸರದಿ ಬರುವವರೆಗೆ ಹೊರಗೆ ಕಾಯುತ್ತಿರಬೇಕಾಗುತ್ತದೆ. ಆಗ ಸಚಿವರನ್ನು ನೋಡುವ ತವಕವೂ ಇರುತ್ತದೆ. ಇತರರೊಡನೆ ಮಾತುಕತೆಯೂ ನಡೆಯುತ್ತದೆ. ಇದನ್ನು ಬಾಹ್ಯದಶೆಗೆ ಹೋಲಿಸಬಹುದು. ಮುಂದೆ ಒಳಗಡೆ ಹೋಗಿ ಕಾರ್ಯದರ್ಶಿ ಮುಂತಾದವರೊಡನೆ ಮಾತನಾಡಬೇಕಾಗುತ್ತದೆ. ಆಗ ಅವರು ತಾವು ಬಂದ ಕಾರ್ಯದ ವಿಚಾರವಾಗಿ ಮಾತ್ರ ಮಾತನಾಡುತ್ತಾರೆ. ಇದನ್ನು ಅರ್ಧಬಾಹ್ಯದೆಶೆಗೆ ಹೋಲಿಸಬಹುದು. ಇನ್ನೂ ಒಳಗೆ ಹೋಗಿ ಸಚಿವರೊಡನೆ ವೈಯಕ್ತಿಕ ಮಾತನಾಡುವಾಗ ಬೇರೆಲ್ಲವೂ ಮರೆತುಹೋಗುತ್ತದೆ. ಇದನ್ನು ಅಂತರ್ದಶೆಗೆ ಹೋಲಿಸಬಹುದು. ಶ್ರೀರಾಮಕೃಷ್ಣರು ಯಾವಾಗಲೂ ಭಗವದ್ಭಾವದಲ್ಲಿಯೇ ಇರುತ್ತಿದ್ದರು. ಮನಸ್ಸಿನ ಸ್ವಲ್ಪ ಭಾಗ ಮಾತ್ರ ಬಾಹ್ಯ ವ್ಯವಹಾರದಲ್ಲಿ ತೊಡಗಿರುತ್ತಿತ್ತು, ಅದೂ ಭಕ್ತರೊಡನೆ ಭಗವದ್ವಿಷಯವಾಗಿ ಮಾತನಾಡುವುದು, ಭಜನೆ ಸಂಕೀರ್ತನೆಗಳಲ್ಲಿ ಭಾಗವಹಿಸುವುದು ಇತ್ಯಾದಿಗಳಲ್ಲಿ. ಹೀಗೆ ಶ್ರೀರಾಮಕೃಷ್ಣರ ಜೀವನದ ಒಳಹೊರಗೆಲ್ಲವೂ ಭಗವನ್ಮಯವಾಗಿತ್ತು – ಜಿಲೇಬಿಯ ಒಳಹೊರಗೆಲ್ಲವೂ ಸಿಹಿಯಾಗಿರುವಂತೆ. (ಅವರೇ ಈ ಉದಾಹರಣೆ ಕೊಟ್ಟಿರುವರು.)

### ನಾಮಮಹಿಮೆ

ಶ್ರೀರಾಮಕೃಷ್ಣರು: ''ಹೌದು, ನಾಮದಲ್ಲಿ ಒಳ್ಳೆ ಮಾಹಾತ್ಮ್ಯ ಇರುವುದೇನೋ ನಿಜ. ಆದರೆ ಅನುರಾಗವಿಲ್ಲದಿದ್ದರೆ ಏನು ದೊರೆಯುತ್ತದೆ? ಭಗವಂತನಿಗಾಗಿ ಪ್ರಾಣ ಸುಮ್ಮನೆ ವ್ಯಾಕುಲ

ಪಡಬೇಕು. ನಾಮವನ್ನೇನೂ ಸುಮ್ಮನೆ ಉಚ್ಚರಿಸುತ್ತ ಕಾಮ ಕಾಂಚನಗಳಲ್ಲಿ ಮನಸ್ಸಿಟ್ಟಿದ್ದರೆ ಭಗವಂತನ ಸಾಕ್ಷಾತ್ಕಾರ ದೊರೆಯುವುದೆ? ಚೇಳು ಅಥವಾ ಜೇಡರಹುಳುಗಳ ಕಡಿತದ ನೋವು ಕೇವಲ ಮಂತ್ರದಿಂದಲೇ ಇಳಿದುಹೋಗುವುದಿಲ್ಲ. ಬೆರಣಿಯ ಹೊಗೆ ಕೊಡಬೇಕು.'' *(ಅಲ್ಲೇ, ಪು.೧೫೮)*

ಅನೇಕ ಪುರಾಣ ಕಥೆಗಳು, ಭಗವನ್ನಾಮವನ್ನು ಜಪಿಸಿದರೆ ಎಲ್ಲ ಪಾಪಗಳೂ ತೊಳೆದು ಹೋಗುತ್ತವೆ ಎಂದು ಬೋಧಿಸುತ್ತವೆ. ಎಂಥ ಪಾಪವನ್ನು ಮಾಡಿದ್ದರೂ ಕೊನೆಗಾಲದಲ್ಲಿ ಭಗವನ್ನಾಮವನ್ನು ಜಪಿಸುತ್ತ ಸಾವನ್ನಪ್ಪಿದರೆ ಮುಕ್ತಿ ಸಿಗುತ್ತದೆ ಎಂದು ಬೋಧಿಸುತ್ತದೆ. ಇಂಥ ಕಥೆಗಳಿರುವುದು ಭಗವನ್ನಾಮದ ಮಹಿಮೆಯನ್ನು ಸಾರುವುದಕ್ಕೆ, ಜನರಲ್ಲಿ ಶ್ರದ್ಧೆಯನ್ನು ಹೆಚ್ಚಿಸುವುದಕ್ಕೆ. ಅವು ಅನೈತಿಕ ಜೀವನಕ್ಕೆ ಲೈಸೆನ್ಸ್ ಅಲ್ಲ. ಅನೇಕರು ಭಾವಿಸುತ್ತಾರೆ, ಎಂಥಾ ಜೀವನವನ್ನು ನಡೆಸಿದರೂ ಪರವಾಗಿಲ್ಲ, ಸಾಯುವಾಗ ಯಾವುದಾದರೂ ಭಗವನ್ನಾಮವನ್ನು ಉಚ್ಚರಿಸಿದರೆ ಸ್ವರ್ಗಕ್ಕೆ ಹೋಗಿಬಿಡಬಹುದು ಎಂದು. ಈ ರೀತಿಯ ಭಾವನೆಗಳಿಂದಾಗಿಯೇ ಸಮಾಜದಲ್ಲಿ ಇಷ್ಟೊಂದು ನೈತಿಕ ಅವನತಿ ಉಂಟಾಗಿರುವುದು. ''ಶರಣರ ಗುಣವನ್ನು ಮರಣದಲ್ಲಿ ನೋಡು'' ಎಂಬ ನಾಣ್ನುಡಿಯಿದೆ. ಶರಣರ ಗುಣವನ್ನು ಅವರ ಜೀವನದಲ್ಲಿ ನೋಡಬೇಕಲ್ಲವೆ? ದುರದೃಷ್ಟದಿಂದ ಮರಣಪೂರ್ವ ಜೀವನಕ್ಕಿಂತ ಮರಣೋತ್ತರ ಜೀವನವೇ ನಮಗೆ ಅತಿ ಮುಖ್ಯವಾಗಿದೆ. ಒಬ್ಬ ಭಕ್ತನು ಗುರುವನ್ನು ಕೇಳುತ್ತಾನೆ: ''ಸಾವಿನ ನಂತರ ಜೀವನವಿದೆಯೆ?''

ಗುರು: ''ಇದು ಮುಖ್ಯವಾದ ಪ್ರಶ್ನೆಯಲ್ಲ. ಸಾವಿಗೆ ಮೊದಲು ಜೀವನವಿದೆಯೇ, ಇದೇ ಮುಖ್ಯವಾದ ಪ್ರಶ್ನೆ.''

ನಾಮದ ಮಹಿಮೆಯನ್ನು ಎತ್ತಿ ಹಿಡಿಯುವುದಕ್ಕೆ ಭಾಗವತದಲ್ಲಿ ಬರುವ ಅಜಾಮಿಳನ ಕಥೆಯನ್ನು ಉದಾಹರಿಸುತ್ತಾರೆ. ''ಯಮನದೂತರು ಬಂದು ಅಜಾಮಿಳನೆಳೆವಾಗ, ನಾರಾಯಣ ಎಂಬ ನಾಮವೇ ಕಾಯ್ತೋ'' ಎಂದು ಶ್ರೀ ಪುರಂದರ ದಾಸರು ಹಾಡುತ್ತಾರೆ. ಅಜಾಮಿಳನು ಅತ್ಯಂತ ಭ್ರಷ್ಟ ಜೀವನವನ್ನು ನಡೆಸುತ್ತಿದ್ದವನು, ಮಕ್ಕಳ ಮೇಲೆ ಅತಿ ವ್ಯಾಮೋಹ ಇದ್ದವನು. ಸಾಯುವ ಸಮಯದಲ್ಲಿ ಯಮದೂತರ ಭಯಂಕರ ರೂಪವನ್ನು ಕಂಡು, ತನ್ನ ಕಿರಿಯ ಮಗನಾದ ನಾರಾಯಣನನ್ನು ಕೂಗಿ ಕರೆದನಂತೆ. ಆಗ ವಿಷ್ಣುವಿನ ದೂತರು ಅಜಾಮಿಳನನ್ನು ವೈಕುಂಠಕ್ಕೆ ಕರೆದುಕೊಂಡು ಹೋಗಲು ಬಂದರಂತೆ. ವಿಷ್ಣುದೂತರಿಗೂ ಯಮದೂತರಿಗೂ ವಾದವಿವಾದ ನಡೆದು, ಕೊನೆಗೆ ಯಮದೂತರು ಅಜಾಮಿಳನನ್ನು ಹಾಗೇ ಬಿಟ್ಟು ಹೊರಟು ಹೋದರು. ಈಗ ವಿಷ್ಣುದೂತರಿಂದ ಭಾಗವತಧರ್ಮವನ್ನು ಆಲಿಸಿ, ಪಶ್ಚಾತ್ತಾಪದಿಂದ ತಪಸ್ಸು ಮಾಡಿ ಕೊನೆಗೆ ಮುಕ್ತಿಯನ್ನು ಪಡೆದನಂತೆ. ಅಷ್ಟೇ ಅಲ್ಲದೆ, ಶ್ರೀರಾಮಕೃಷ್ಣರು ಹೇಳುವಂತೆ, ಅಜಾಮಿಳನು ಹಿಂದಿನ ಜನ್ಮದಲ್ಲಿ ಬೇಕಾದಷ್ಟು ತಪಸ್ಸು ಮಾಡಿರಬಹುದು. ಆದ್ದರಿಂದ ಅಜಾಮಿಳನು ಮುಕ್ತಿಯನ್ನು ಪಡೆದುದು ಭಕ್ತಿಯಿಂದ, ಕೇವಲ ಭಕ್ತಿಯಿಂದ, ಕೇವಲ ಉಕ್ತಿಯಿಂದಲ್ಲ.

### ಆನೆಗೆ ಸ್ನಾನ

ಶ್ರೀರಾಮಕೃಷ್ಣರು: ''ಆನೆಗೆ ಮೈತೊಳೆದು ಸ್ನಾನ ಮಾಡಿಸುವುದರಿಂದ ಆಗುವ ಪ್ರಯೋಜನವೇನು? ಅದು ಮತ್ತೆ ಧೂಳು, ಬಗ್ಗಡ, ಬದಿ ಹೊಯ್ದುಕೊಂಡು ಎಂದಿನಂತೆಯೇ ಆಗಿಬಿಡುತ್ತದೆ. ಆದರೆ ಅದು ಗಜಶಾಲೆಯನ್ನು ಪ್ರವೇಶಿಸುವ ಮುನ್ನ ಚೆನ್ನಾಗಿ ಮೈತೊಳೆದು ಸ್ನಾನ ಮಾಡಿಸಿಬಿಟ್ಟರೆ ಸ್ವಚ್ಛವಾಗಿಯೇ ಇರುತ್ತದೆ. ಭಗವನ್ನಾಮೋಚ್ಚಾರಣೆಯ ಮೂಲಕ ಮನುಷ್ಯ ಒಮ್ಮೆ ಶುದ್ಧನಾದ ಅಂತ ಇಟ್ಟುಕೊ. ಆದರೆ ಮತ್ತೆ ಆತ ಅನೇಕ ಪಾಪಗಳಲ್ಲಿ ತೊಡಗಿಬಿಡುತ್ತಾನೆ.'' *(ಅಲ್ಲೇ, ಪು.೧೫೫)*

ಸತ್ಸಂಗಾದಿಗಳಲ್ಲಿ ಭಾಗವಹಿಸುವುದೆಂದರೆ ಸ್ನಾನ ಮಾಡಿದಂತೆ. ಪುನಃ ವ್ಯವಹಾರಗಳಲ್ಲಿ ತೊಡಗುವುದೆಂದರೆ ಮೈಮೇಲೆ ಧೂಳು ಎರಚಿಕೊಂಡಂತೆ. ಸಾಂಸಾರಿಕ ವ್ಯವಹಾರಗಳಲ್ಲಿ ತೊಡಗಿರುವಾಗಲೂ ಮನಸ್ಸು ಭಗವದ್ಭಾವದಲ್ಲಿ ಇರಬೇಕು, ಅದನ್ನು ಭಗವಂತನ ಗೂಟಕ್ಕೆ ಕಟ್ಟಿಹಾಕಬೇಕು, ಜಪ, ಪ್ರಾರ್ಥನೆ ಇತ್ಯಾದಿಗಳ ಮೂಲಕ. ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ: ''ನಮ್ಮ ಮೇಲೆ ಗ್ರಹ, ನಕ್ಷತ್ರಗಳ ಪ್ರಭಾವವಿದೆ; ಸುತ್ತಲಿನ ಪರಿಸರ ಮತ್ತು ವಾತಾವರಣದ ಪ್ರಭಾವವಿದೆ. ಆದರೆ ಇವುಗಳಾವುದರಿಂದಲೂ ನಾವು ವಿಚಲಿತರಾಗುವ ಆವಶ್ಯಕತೆಯಿಲ್ಲ. ಅವುಗಳ ವಿರುದ್ಧ ಹೋರಾಡಲಾಗದಿದ್ದರೆ ನಿಮ್ಮ ಸುತ್ತ ಒಂದು ಕೋಟೆಯನ್ನು ಕಟ್ಟಿಕೊಂಡು ಅವುಗಳ ಪ್ರಭಾವದಿಂದ ರಕ್ಷಿಸಿಕೊಳ್ಳಿ. ಅಭ್ಯಾಸದ ಮೂಲಕ ನಾವು ಈ ಕೋಟೆಯನ್ನು ಕಟ್ಟಬೇಕು.''

ಶ್ರೀರಾಮಕೃಷ್ಣರು ಹೇಳುವಂತೆ ಜನರು ಮನಶ್ಶುದ್ಧಿಗಾಗಿ ಗಂಗಾಸ್ನಾನ ಮಾಡುತ್ತಾರೆ; ಆದರೆ ನೀರಿಗೆ ಇಳಿಯುವಾಗ ಜಠರದಲ್ಲಿರುವ ಪಾಪಪಕ್ಷಿಗಳು ದಡದಲ್ಲಿರುವ ಮರಗಳ ಮೇಲೆ ಹೋಗಿ ಕುಳಿತುಕೊಳ್ಳುತ್ತದೆ; ನೀರಿನಿಂದ ಹೊರಬಂದ ಕೂಡಲೇ ಪಾಪಪಕ್ಷಿಗಳು ಹಾರಿ ಬಂದು ಜನರೊಳಗೆ ಸೇರಿಕೊಳ್ಳುತ್ತವೆ. ಒಂದು ಸಂಸ್ಕೃತ ಶ್ಲೋಕವಿದೆ:

**ಸರ್ವೇಷಾಮಪಿ ಶೌಚಾನಾಮರ್ಥಶೌಚಂ ಪರಂ ವಿದುಃ ।**
**ಯೋಽರ್ಥಶುಚಿಃ ಸ ಶುಚಿಃ ನ ಮೃದ್ವಾರಿ ಶುಚಿಃ ಶುಚಿಃ ॥**

''ಎಲ್ಲ ಶೌಚಗಳಿಗಿಂತಲೂ ಅತ್ಯಂತ ಹಿರಿದಾದದ್ದು ಅರ್ಥಶೌಚ. ಯಾರು ಅರ್ಥಶುಚಿಯೋ ಅವನೇ ಶುಚಿ. ಕೇವಲ ನೀರು ಮಣ್ಣುಗಳಿಂದ ಶುಚಿಯಾದವನು ಶುಚಿಯೇ ಅಲ್ಲ.'' 'ಅರ್ಥಶೌಚ'ವೆಂದರೆ ಪ್ರಾಮಾಣಿಕವಾಗಿ, ಧರ್ಮಬದ್ಧವಾಗಿ ಧನಸಂಪಾದನೆ ಮಾಡುವುದು. ಯಾರು ಅನೈತಿಕವಾಗಿ ಹಣ ಸಂಪಾದನೆ ಮಾಡಿರುತ್ತಾರೋ ಅವರು ತಂದುಕೊಟ್ಟ ತಿಂಡಿ ಪದಾರ್ಥಗಳನ್ನು ಶ್ರೀರಾಮಕೃಷ್ಣರು ಸ್ವೀಕರಿಸುತ್ತಿರಲಿಲ್ಲ.

*(ಮುಂದುವರಿಯುವುದು)*